ಪ್ರತಿಷ್ಠಾ ಪಾಂಡ್ಯಾ ಇಂಗ್ಲಿಷ್ ಮತ್ತು ಗುಜರಾತಿ ಭಾಷೆಯಲ್ಲಿ ಬರೆಯುವ ದ್ವಿಭಾಷಾ ಕವಯಿತ್ರಿ. ಎರಡೂ ಭಾಷೆಗಳಲ್ಲಿ ಹಲವು ಕೃತಿಗಳನ್ನು ಪ್ರಕಟಿಸಿದ್ದಾರೆ. ಕೆಲ ಕಾಲ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕಿಯಾಗಿ ಕೆಲಸ ಮಾಡಿರುವ ಅವರು, ಪ್ರಸ್ತುತ 'ಪೀಪಲ್ಸ್ ಆರ್ಕೈವ್ ಆಫ್ ರೂರಲ್ ಇಂಡಿಯಾ' ಎಂಬ ಅಂತರ್ಜಾಲ ಪತ್ರಿಕೋದ್ಯಮ ಆರ್ಕೈವ್ ಬಳಗದಲ್ಲಿ ಹಿರಿಯ ಸಂಪಾದಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಚ್ ಮತ್ತು ಗುಜರಾತ್ ಸಾಹಿತ್ಯದ ಜನಪದ ಸಾಹಿತ್ಯದ ದಾಖಲೀಕರಣದ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ.

ಹೊಸ ದೃಷ್ಟಿಕೋನವನ್ನು ಕೊಡುವುದರಿಂದ ಬಹಳ ಗಮನಾರ್ಹವೆಂದು ಪರಿಗಣಿಸಲ್ಪಡುತ್ತವೆ. ಜನಸಮೂಹದ ಮಾನಸಿಕತೆಯ ನಡುವೆ ಓರ್ವ ಸೂಕ್ಷ್ಮ ಮನಸ್ಸಿನ ವ್ಯಕ್ತಿಯ ಅಸಹಾಯಕತೆ ಮತ್ತು ಬಹುಧರ್ಮಗಳ ಜನರು ಒಟ್ಟಾಗಿ ಬದುಕುವ ಒಂದು ಸಂಪ್ರದಾಯವನ್ನೇ ನಾಶ ಮಾಡುವ ವಿಚಾರಗಳ ಉಲ್ಲೇಖವಿದೆ.

ಕಳೆದೊಂದು ದಶಕದಲ್ಲಿ ಅವರು ಬರೆದ ಕಥೆಗಳನ್ನು ಗಮನಿಸಿದರೆ, ಅಲ್ಲಿ ವೇದನೆ ಮತ್ತು ಚೀರುವಿಕೆಯ ಸ್ಫೋಟವೊಂದು ನಮ್ಮನ್ನು ಬಹುವಾಗಿ ಕಾಡುತ್ತದೆ. ಉಸಿರುಗಟ್ಟುವ ಪ್ರಜಾಪ್ರಭುತ್ವದ ಸ್ಥಿತಿಯ ಕುರಿತು ಅನೇಕ ಕಥೆಗಳನ್ನು ಅವರು ಬರೆದಿದ್ದಾರೆ. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅಳಿಸಿಹಾಕುವ ರೀತಿಯಲ್ಲಿ ಜನಸಮೂಹದ ಸರ್ವಾಧಿಕಾರಿ ವರ್ತನೆ, ಗ್ರಹಿಸಲಾಗದ ರಾಜಕೀಯ ಒತ್ತಡಗಳು, ದೇಶದಲ್ಲಿ ಮಹಿಳೆಯನ್ನು ತುಚ್ಛವಾಗಿ ಕಾಣುವ ಸ್ಥಿತಿ, ನಿರ್ಣಾಯಕ ಧ್ವನಿಗಳ-ಚಿಂತನೆಗಳ ಕ್ರೂರ ಕೊಲೆ, ದೇಶದ ಜನರಲ್ಲಿರುವ ದೊಂಬಿಯ ಮನಸ್ಥಿತಿಗಳನ್ನು ಅವರು ಕಥೆಗಳಲ್ಲಿ ಹಿಡಿದಿಡಲು ಪ್ರಯತ್ನಿಸಿದ್ದಾರೆ. 'ರೇಶಮಿ ರಜೈಮಾ ಬಾಕೊರುನಂ', 'ಕಂಪಾಸ್ ಬಾಕ್ಸ್‌ಮಾ ಬೆಡೇಲಿ ಪಾಂಖೋ', 'ಮುಟ್ಟಿಭರ್ ಹವಾ', 'ವೀರ್ ಪೂಜಾ', 'ಧಾರೋಕೆ-ಆ ವರ್ತಾನಥಿ', 'ಜುಲೈ 15, 2017', 'ಧುಮ್ಮಸಿಯಾ ಸವಾರ್ನೊ ಸೂರಜ್' ಕಥೆಗಳನ್ನು ಓದಿದರೆ, ಈ ದೊಂಬಿ ಮನಸ್ಥಿತಿಯು ನಮ್ಮ ದೇಶದ ಆರೋಗ್ಯಕರ ಸಮಾಜವನ್ನು ಎತ್ತ ಕೊಂಡೊಯ್ಯುತ್ತದೆ ಎಂಬ ಪ್ರಶ್ನೆಯನ್ನು ಮುಖಾಮುಖಿಯಾಗಿಸುತ್ತದೆ. 2024ರಲ್ಲಿ ಪ್ರಕಟವಾದ ಅವರ ಕಾದಂಬರಿ 'ಭೂಮಿ ಸೂಕ್ತ್' ಕೂಡ ಇದೇ ಪ್ರಶ್ನೆಯನ್ನು ಕೇಳುತ್ತದೆ. ಅವರ ಮೊದಲ ಕಾದಂಬರಿ 'ಆಟ್ಮೊ ರಂಗ್' ಪ್ರಸಿದ್ಧ ಕಲಾವಿದೆ ಅಮೃತಾ ಶರ್ಗಿಲ್ ಅವರ ಜೀವನದ ಘಟನೆಗಳನ್ನು ಆಧರಿಸಿದ್ದು.

ತಮ್ಮ ಸುತ್ತಮುತ್ತ ನಡೆಯುವ ಸಾಮಾನ್ಯ ಘಟನೆಗಳಿಂದ ಸ್ಫೂರ್ತಿ ಪಡೆಯುವ ಹಿಮಾಂಶಿ ಶೆಲತ್ ತಮ್ಮ ಆಲೋಚನೆಗಳನ್ನು ಸಂಕ್ಷಿಪ್ತ ರೀತಿಯಲ್ಲಿ ಕಥೆಗಳ ಮೂಲಕ ಅಭಿವ್ಯಕ್ತಿಗೊಳಿಸುತ್ತಾರೆ. ನಮ್ಮ ದೈನಂದಿನ ಭಾಷೆಯನ್ನೇ ಸೃಜನಶೀಲ ಸಾಧನವನ್ನಾಗಿ ಬಳಸುವ ಅವರದ್ದು ತುಂಬಾ ಸಾಮಾನ್ಯ ರೀತಿಯ ಅಭಿವ್ಯಕ್ತಿ ಅನಿಸಿದರೂ ಓದುಗರನ್ನು ಅವರು ವಿಚಲಿತಗೊಳಿಸಿಬಿಡುತ್ತಾರೆ.

ಸಾಮಾಜಿಕ ಬದ್ಧತೆ ಮತ್ತು ಸಾಹಿತ್ಯಪ್ರೀತಿಯ ಅಪರೂಪದ ಸಂಗಮಕ್ಕೆ ಹಿಮಾಂಶಿ ಅವರ ಕಥೆಗಳು ಉದಾಹರಣೆಯಾಗಿ ನಿಲ್ಲುತ್ತವೆ. ಇಂದಿನ ಕಾಲದ ವಾಸ್ತವದಲ್ಲಿ ಬೇರೂರುತ್ತಲೇ ಕಥೆ ಹೇಳುವ ಕಲಾತ್ಮಕ ಪರಂಪರೆಯನ್ನು ಎತ್ತಿಹಿಡಿಯುವ ಕೌಶಲ ಅವರಿಗೆ ಸಿದ್ಧಿಸಿದೆ. ಸೂಕ್ಷ್ಮ ಮನಸ್ಸಿನ ಓದುಗರನ್ನು ಹಿಮಾಂಶಿ ಕಥೆಗಳು ದಿನಗಟ್ಟಲೆ ಕಾಡುವ ಸಾಮರ್ಥ್ಯ ಹೊಂದಿವೆ. ಇಂದಿನ ಉಸಿರುಗಟ್ಟುವ, ಒರಟು ವಾತಾವರಣದಲ್ಲಿ, ದಬ್ಬಾಳಿಕೆಯ ದಿನಗಳಲ್ಲಿ, ಅದೃಶ್ಯ ಸೆನ್ಸಾರ್‌ಶಿಪ್ ನಿಯಮಗಳು ನಮ್ಮ ಮಾತು ಮತ್ತು ಬರಹವನ್ನು ನಿಯಂತ್ರಿಸುತ್ತಿರುವ ಕಾಲದಲ್ಲಿ, ಸಾರ್ವಜನಿಕರನ್ನು ಅನೇಕ ನೆಪಗಳೊಂದಿಗೆ ವಿಭಾಗಿಸುವ ಕಾಲದಲ್ಲಿ, – ಇಂತಹ ಕಥೆಗಳನ್ನು ಬರೆಯುವುದು ಸುಲಭದ ಮಾತಲ್ಲ. ಇಂತಹ ಬರವಣಿಗೆಯನ್ನು ಮಾಡಲು ಎದೆಗಾರಿಕೆ ಬೇಕು. ಒಂದೇ ವರ್ಗದ ಓದುಗರನ್ನು ಉದ್ದೇಶಿಸಿ ಸಿಹಿಯಾದ ಸಂವೇದನೆಗಳನ್ನೇ ಎತ್ತಿಹಿಡಿಯುವ ಸಾಹಿತ್ಯ ಸೃಷ್ಟಿಯಾಗುತ್ತಿರುವ ಸಂದರ್ಭದಲ್ಲಿ ನಮಗೆ ಹಿಮಾಂಶಿ ಅವರ ಕಥೆಗಳು ಓದಲು ಲಭಿಸುತ್ತಿರುವುದು ಸಂತೋಷದ ಸಂಗತಿ. ಹಿಮಾಂಶಿ ಶೆಲತ್ ಅವರ ಹೆಸರು ಗುಜರಾತಿ ಸಾಹಿತ್ಯದಲ್ಲಷ್ಟೇ ಅಲ್ಲ, ಭಾರತೀಯ ಸಾಹಿತ್ಯ ಕ್ಷೇತ್ರದಲ್ಲಿ ಮಹತ್ವವಾದುದು. ●